ಈ) ಉದ್ಭವಿಸುವುದಿಲ್ಲ.

ಉ) ಇಲ್ಲ.

ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಯ ಬಗ್ಗೆ

2606 (3138) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಈ ಕೆರೆಗಳ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಹಾಗಿದ್ದಲ್ಲಿ, ತೆರವುಗೊಳಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಕೆರೆಗಳನ್ನು ಅಳತೆ ಮಾಡಲು ಸರ್ಕಾರದ ವತಿಯಿಂದ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 3298 ಕೆರೆಗಳು ನಿರ್ವಹಣೆಯಲ್ಲಿರುತ್ತವೆ. ಅವುಗಳ ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಆ) ಮತ್ತು ಇ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಪೈಕಿ ಬಹುತೇಕ ಪುರಾತನ ಕೆರೆಗಳಾಗಿದ್ದು, ಈ ಕೆರೆಗಳ ಅಂಗಳದ ಜಮೀನು ವಿವಿಧ ಪ್ರಮಾಣದಲ್ಲಿ ಒತ್ತುವರಿಯಾಗಿರುತ್ತದೆ. ಈ ಎಲ್ಲಾ ಕೆರೆಗಳಲ್ಲಿ ಭೂಮಾಪನ ಕಾರ್ಯ ಕೈಗೊಂಡು ನಿರ್ದಿಷ್ಟವಾಗಿ ಎಷ್ಟು ವಿಸ್ತೀರ್ಣ ಒತ್ತುವರಿಯಾಗಿದೆಯೆಂದು ತಿಳಿದುಕೊಂಡು ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಭೂಮಾಪಕರುಗಳ ಕೊರತೆಯಿಂದಾಗಿ ಒತ್ತುವರಿಯಾಗಿರುವ ಪ್ರದೇಶವನ್ನು ಭೂಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಹಾಲಿ ಇರುವ ಭೂಮಾಪಕರುಗಳಿಂದ ಒತ್ತುವರಿಯನ್ನು ಅಳತೆ ಮಾಡಿಸಿ ಒತ್ತುವರಿಯಾಗಿರುವ ವಿಸ್ತೀರ್ಣವನ್ನು ಗುರುತಿಸುವಂತೆ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚನೆಯನ್ನು ನೀಡಲಾಗಿರುತ್ತದೆ.

ಈ ವರೆಗೆ ಒಟ್ಟು 97 ಕೆರೆಗಳ ಸರ್ವೆ ಕಾರ್ಯ ನಡೆಸಿ ಒತ್ತುವರಿ ವಿಸ್ತೀರ್ಣವನ್ನು ಗುರುತಿಸಲಾಗಿರುತ್ತದೆ. ಈ ಒತ್ತುವರಿಯನ್ನು ತೆರವುಗೊಳಿಸಲು ಕಂದಾಯ ಮತ್ತು ಭೂಮಾಪನ ಇಲಾಖೆಗಳಿಗೆ ಪತ್ರವನ್ನು ಬರೆಯಲಾಗಿದ್ದು, ಒತ್ತುವರಿಯಾದ ಜಮೀನನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಅನುಬಂಧ

ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿ ದಿನಾಂಕ: 01.04.2002ರ ಅಂತ್ಯದಲ್ಲಿದ್ದಂತೆ 40ರಿಂದ 2000 ಹೆಕ್ಟೇರುವರೆಗಿನ ಅಚ್ಚುಕಟ್ಟು ಹೊಂದಿರುವ ಸಣ್ಣ ನೀರಾವರಿ ಕೆರೆಗಳ ಜಿಲ್ಲಾವಾರು ವಿವರಗಳು:

ಕ್ರ.ಸಂ.	ಜಿಲ್ಲೆ	ಕೆರೆಗಳ ಸಂಖ್ಯೆ
1	2	3
1	ಬೆಂಗಳೂರು (ನಗರ)	72
2	ಬೆಂಗಳೂರು (ಗ್ರಾಮಾಂತರ)	206

1	2	3
3	ಚಿತ್ರದುರ್ಗ	166
4	ದಾವಣಗೆರೆ	91
5	ಕೋಲಾರ	306
6	ಶಿವಮೊಗ್ಗ	325
7	ತುಮಕೂರು	374
8	ಮೈಸೂರು	98
9	ಚಾಮರಾಜನಗರ	64
10	ಮಂಡ್ಯ	50
11	ಹಾಸನ	175
12	ಚಿಕ್ಕಮಗಳೂರು	118
13	ದಕ್ಷಿಣ ಕನ್ನಡ	2
14	ಉಡುಪಿ	4
15	ಕೊಡಗು	32
16	ಬೆಳಗಾಂವ	216
17	ಬಿಜಾಪುರ	101
18	ಬಾಗಲಕೋಟೆ	39
19	ಧಾರವಾಡ	107
20	ಗದಗ್	22
21	ಹಾವೇರಿ	260
22	ಉತ್ತರಕನ್ನಡ	86
23	ಗುಲ್ಬರ್ಗಾ	140
24	ಬೀದರ್	83
25	ಬಳ್ಳಾರಿ	63
26	ರಾಯಚೂರು	54
27	ಕೊಪ್ಪಳ	44
	ಒಟ್ಟು	**3298**

ರಾಜ್ಯದಲ್ಲಿ ಅಬಕಾರಿ ಹರಾಜಿನಿಂದ ಬರುವ ಹಣ

2607(3141) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ರಾಜ್ಯದ ಬೊಕ್ಕಸಕ್ಕೆ ಅಬಕಾರಿ ಸಾರಾಯಿ ಹರಾಜಿನಿಂದ ಬಂದಿರುವ ಹಣ ಎಷ್ಟು;